



ಇನ್‌ಸ್ಪೆಕ್ಟರ್: ಮಕ್ಕಳೇ ನಿಮಗಿಷ್ಟವಾದ ಹಾಡು ಯಾವುದು?

ವಿದ್ಯಾರ್ಥಿಗಳು: ಜನಗಣಮನ ಸಾರ್

ಇನ್‌ಸ್ಪೆಕ್ಟರ್: ವೆರಿಗುಡ್'! ಅದು ನಿಮಗೆ ಯಾಕೆ ಇಷ್ಟ?

ವಿದ್ಯಾರ್ಥಿಗಳು: ಅದು ಮುಗಿದ ಕೂಡಲೇ ನಾವು ಮನೆಗಳಿಗೆ ಹೋಗಬಹುದು ಅದಕ್ಕೆ ಸಾರ್.

★★★

ಗುಂಡ: ಜೋತಿಷಿಗಳೇ! ನನ್ನ ಮಗ ಮೂರು ದಿನದಿಂದ ಕಾಣ್ತಾ ಇಲ್ಲ! ಏನಾದರೂ ಮಾಡಿ ಅವನು ಹಿಂತಿರುಗಿ ಮನೆಗೆ ಬರುವ ಹಾಗೆ ಮಾಡಿ.

ಜೋತಿಷಿ: ಈ ವಿಭೂತೀನ ಅವನ ಹಣೆಗೆ ಹಚ್ಚಿ! ಎಲ್ಲಿದ್ದರೂ ವಾಪಸ್ ಮನೆಗೆ ಬರುತ್ತಾನೆ.

★★★

ಅತ್ತೆ: ಸಾಕು ಬಿಡು ತಾಯಿ! ನೀನು ಹೀಗೆ ನನ್ನ ಕೈಕಾಲುಗಳಿಗೆ ತೈಲ ಹಚ್ತಾ ಇದ್ರೆ ನಿನ್ನ ಕೈಗಳು ನೋಯುವುದಿಲ್ಲವೇ?

ಸೊಸೆ: ಪರವಾಗಿಲ್ಲ ಅತ್ತೆ! ನೀವು ಈಗ ಸುಮ್ಮನೆ ಕುಳಿತುಕೊಳ್ಳಿ! ಮುಂದಿನ ವಾರದಿಂದ ಕೆಲಸದವಳು ಬರುವುದಿಲ್ಲವಲ್ಲ. ನಿಮಗೆ ನೆನಪಿದೆ ತಾನೇ?

**(ಸಂಗ್ರಹ) ಎಂ.ಕೆ.ಮಂಜುನಾಥ್, ಬೆಂಗಳೂರು**

---

ಗೇಟಿನ ಬಳಿ ನಿಂತಿದ್ದ ಗೃಹಿಣಿಯನ್ನು ಗುಜರಿಯಾತ ಕೇಳಿದ.

'ಮೇಡಂ, ಹಳೇ ಪೇಪರ್, ಪುಸ್ತ, ಗಿಸ್ತ?'

'ಇಲ್ಲಪ್ಪ ನಾವು ಪೇಪರ್ ತರಿಸೋಲ್ಲ. ಪುಸ್ಕ, ಗಿಸ್ಕ ಓದಲ್ಲ.'

'ಮೇಡಂ ಬಾಟ್ಲಿ ಗೀಟ್ಲಿ?'

'ಅವೆಲ್ಲ ಗೇಟಿಂದ ಹೊರಗೆ, ಒಳಗೆ ತಂದ್ರೆ ತಂದವರೂ, ಬಾಟ್ಲ ಒಟ್ಟಿಗೆ ಪುಡಿ ಪುಡಿ.'

'ಕಬ್ಬಿಣ– ಗಿಬ್ಬಿಣ.'

'ಇಲ್ಲ ಇಲ್ಲ. ಒಂದು ದಬ್ಬಣಾನೂ ಇಲ್ಲ.'

'ಹೋಗ್ಲಿ ಏನಾದ್ರೂ ಖಿಚಡ ಗಿಚಡ?'

'ಹೂಂ! ಸ್ವಲ್ಪ ನಿಂತ್ಕೋಪ್ಪಾ, ಯಜಮಾನ್ರು ಬರ್‍ಲಿ ಹಾಕ್ತೀನಿ.'

★★★

'ಗಂಡಾ ಗುಂಡಿ ಕಲ್ಯಾಣ ಮಂದಿರದಲ್ಲಿ ಗುಂಡನ ಮದುವೆ. ರಾಹುಕಾಲಕ್ಕೆ ಮೊದಲೇ ಮಾಂಗಲ್ಯಧಾರಣೆ ಆಗಬೇಕಲ್ಲ?' ಪುರೋಹಿತರು ಅವಸರ ಮಾಡಿದರು: 'ವಾದ್ಯ, ವಾದ್ಯ'

ಗುಂಡ ಮಡದಿಗೆ ತಾಳಿ ಕಟ್ಟುತ್ತಿದ್ದಂತೆಯೇ ವಾದ್ಯಗಾರ ರಾಮಣ್ಣ ಸೊಗಸಾಗಿ ನುಡಿಸಿದ 'ಇದಿ ನ್ಯಾಯಮಾ ಸೀತಾರಾಮಾ!'

★★★

ಭಾನುವಾರ ಮನೆಯಲ್ಲಿ ಅಜ್ಜನ ಹ್ಯಾಪಿ ಬರ್ತ್‌ಡೇ.

ಭೂಗದಸ್ತಾದ ಊಟ ಹೊಡೆದು ಮನೆಮಂದಿಯಲ್ಲಾ ಹಾಲಿನಲ್ಲಿ ಸೇರಿದ್ದರು. ಮಗ ಇಂಗ್ಲಿಷ್ ಚಿತ್ರ 'ವಾರ್ ಟೈಂ ಲವ್ ಸ್ಟೋರಿ' ಕಿರುತೆರೆಗೆ ಸೆಟ್ ಮಾಡುತ್ತಿದ್ದ. ಪಾಪು ಮುದ್ದು ಮುದ್ದಾಗಿ ಅಜ್ಜನ ಬಳಿ ಬಂದು ಹೇಳಿತು.

'ಅಜ್ಜಾ, ಕಣ್ ಮುಚ್ಕೊ. ಕಣ್ ಮುಚ್ಕೋ.'

ಅಜ್ಜ ನಕ್ಕರು: 'ಯಾಕೋ, ಮುದ್ದು?'

ಮುದ್ದು ಪಾಪು ಉಲಿಯಿತು: 'ಅಜ್ಜ ಮತ್ತೆ ಅಮ್ಮ ಹೇಳ್ತಾ ಇದ್ಲು ಪಕ್ಕದ್ಮನೆ ಆಂಟಿಗೆ– ಅಜ್ಜ ಕಣ್ ಮುಚ್ಚಿದ್ರೆ ನಂಗೆ ತುಂಬಾ ದುಡ್ ಸಿಗುತ್ತೆ ಅಂತ. ಅದಕ್ಕೆ ಕಣ್ ಮುಚ್ಕೊ'

ನೆರೆದಿದ್ದಸಭಾ ಸದರೆಲ್ಲಾ ಸೊಸೆ ಕಡೆಗೆ ತಿರುಗಿದರು.

ಸೊಸೆ ದಿಢೀರ್ ಪರಾರಿ!

★★★

'ಹೋ' ಎಂದು ಅರಚುತ್ತಾ ಮಹಡಿ ಇಳಿದು ಬಂದ ಮರಿ ಗುಂಡನನ್ನು ಕಂಡು ತಾಯಿ ರೇಗಿದಳು.

'ಕತ್ತೇನನ್ ಮಗನೇ, ಮತ್ತೇನಾಯ್ತೋ ಅರಚೋಕೆ?'



'ಅಮ್ಮಾ, ಮತ್ತೆ, ಮತ್ತೆ, ಅಪ್ಪ ಹ್ಯಾಮರ್ ತಗೊಂಡು ಗೋಡೆಗೆ ಮೊಳೆ ಹೊಡೀತಿದ್ದರು. ಗುರಿ ತಪ್ಪಿ ಹ್ಯಾಮರ್ ಬಡಿದು ಅಪ್ಪನ ಕೈ ಜಜ್ಜಿ ಹೋಯ್ತು.'

'ಸರಿ. ಸರಿ. ಅದಕ್ಕೆ ನೀನ್ಯಾಕೆ ಅಳ್ತೀಯಾ?'

'ನಾನು ಅಳಲಿಲ್ಲಮ್ಮ. ನಕ್ಕಿದ್ದಕ್ಕೆ ಅಪ್ಪ...' (ಮರಿಗುಂಡ ಕೆನ್ನೆ ಸವರಿಕೊಂಡ)

★★★

ಮೊನ್ನೆ ಹ್ಯಾರಿ– ಮೇರಿ ಮದುವೆಯಾದರು. ರಿಸೆಪ್ಷನ್ ಗ್ರ್ಯಾಂಡ್ ಆಗಿತ್ತು. ಡೋರಿ ತಾಯಿಯನ್ನು ಕೇಳಿದಳು: 'ಮಮ್ಮಿ, ಮಮ್ಮಿ, ಮೇರಿ ಯಾಕೆ ವೈಟ್ ಡ್ರೆಸ್ ಹಾಕ್ಕೊಂಡಿದಾಳೆ?'

'ವೈಟ್ ಅಂದ್ರೆ ಶುಭ, ಸಂತೋಷ. ಇವತ್ತು ಮೇರಿಗೆ ಜನ್ಮದಲ್ಲೇ ಭಾರೀ ಸಂತೋಷದ ದಿನ. ಹ್ಯಾಪಿಯಸ್ಟ್ ಡೇ. ಅದ್ಕೆ ವೈಟ್ ಡ್ರೆಸ್‌ನಲ್ಲಿ ಇದಾಳೆ.'

ಪುಟ್ಟ ಡೋರಿ ಅನುಮಾನಿಸಿದಳು: 'ಮತ್ತೆ ಹ್ಯಾರಿ ಯಾಕೆ ಬ್ಲ್ಯಾಕ್ ಸೂಟಲ್ಲಿ ಇದಾನೆ? ಅವ್ನಿಗೆ?'

**(ಸಂಗ್ರಹ) ರಘುನಂದನ್. ಎನ್.ಎಸ್., ಬೆಂಗಳೂರು**